ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ : 283

ಸದಸ್ಯರ ಹೆಸರು : ಶ್ರೀ ಭೋಜೇಗೌಡ(ಶಿಕ್ಷಕರ ಕ್ಷೇತ್ರ)

ಉತ್ತರಿಸಬೇಕಾದ ದಿನಾಂಕ : 12/07/2018

ಉತ್ತರಿಸಬೇಕಾದ ಸಚಿವರು : ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು.

ಕ್ರ ಸಂ	ಪ್ರಶ್ನೆ	ಉತ್ತರ
ಅ)	ಪದವಿ ಪೂರ್ವ ವೃತ್ತಿ ಶಿಕ್ಷಣ (ಜೆ.ಓ.ಸಿ) ಇಲಾಖೆಯ 29 ಕೋರ್ಸ್‌ಗಳನ್ನು ರದ್ದುಪಡಿಸಲಾಗಿದ್ದು ಯಾವಾಗ;	ಪದವಿ ಪೂರ್ವ ವೃತ್ತಿ ಶಿಕ್ಷಣ ಇಲಾಖೆಯ 29 ಕೋರ್ಸ್‌ಗಳನ್ನು 2011-12ನೇ ಸಾಲಿನಿಂದ ರದ್ದುಗೊಳಿಸಲಾಗಿದೆ.
ಆ)	ಈ ಇಲಾಖೆಯಲ್ಲಿ ಕೆಲಸ ನಿರ್ವಹಿಸುತ್ತಿದ್ದ ಅರೆಕಾಲಿಕ ಬೋಧಕ ಮತ್ತು ಬೋಧಕೇತರ ಸಿಬ್ಬಂದಿಗಳ ಸಂಖ್ಯೆ ಎಷ್ಟು; ಸರ್ಕಾರ ಇವರನ್ನು ಯಾವಾಗ ವಿವಿಧ ಇಲಾಖೆಯಲ್ಲಿ ವಿಲೀನಗೊಳಿಸಿದೆ;	ಅಧಿಸೂಚನೆ ಸಂಖ್ಯೆ: ಸಂವ್ಯಶಾಇ 22 ಶಾಸನ 2011 ದಿನಾಂಕ:06/04/2011ಕ್ಕೆ ನಿರಂತರವಾಗಿ 05 ವರ್ಷ ಸೇವೆ ಸಲ್ಲಿಸಿರುವ ಸರ್ಕಾರಿ 1263 ಮತ್ತು ಅನುದಾನಿತ ಸಂಸ್ಥೆಗಳ 1393 ಸಿಬ್ಬಂದಿಯವರನ್ನು (ಒಟ್ಟು 2656) ಖಾಯಂಗೊಳಿಸಿ ವಿವಿಧ ಇಲಾಖೆ/ಸಂಸ್ಥೆಗಳಲ್ಲಿ ವಿಲೀನಗೊಳಿಸಲಾಗಿದೆ ಹಾಗೂ 126 ಸಿಬ್ಬಂದಿಯವರು ವಿಲೀನಕ್ಕೆ ಬಾಕಿ ಇರುತ್ತಾರೆ. ವಿವರ ಈ ಕೆಳಕಂಡಂತಿದೆ:-

ಸರ್ಕಾರಿ ಇಲಾಖೆಗಳು			ಅನುದಾನಿತ ಸಂಸ್ಥೆಗಳು		
1.	ಪಶುಸಂಗೋಪನಾ ಇಲಾಖೆ. –	01	1.	ಸಾರ್ವಜನಿಕ ಶಿಕ್ಷಣ ಇಲಾಖೆ.	424 ದ್ವಿ.ದ.ಸ
2.	ಕೃಷಿ ಇಲಾಖೆ. –	25	2.	ಸಾರ್ವಜನಿಕ ಶಿಕ್ಷಣ ಇಲಾಖೆ.	464 ಶ್ರಮಿಕ ಶಿಕ್ಷಕರು.
3.	ಆಹಾರ ಮತ್ತು ನಾಗರೀಕ ಸರಬರಾಜು ಇಲಾಖೆ. –	27	3.	ಸಾರ್ವಜನಿಕ ಶಿಕ್ಷಣ ಇಲಾಖೆ.	16 ಸಹ ಶಿಕ್ಷಕರು
4.	ಮುದ್ರಣ ಮತ್ತು ಲೇಖನ ಸಾಮಗ್ರಿ ಇಲಾಖೆ. –	04	4.	ಪದವಿ ಪೂರ್ವ ಶಿಕ್ಷಣ ಇಲಾಖೆ.	133 ಉಪನ್ಯಾಸಕರು.
5.	ಗ್ರಂಥಾಲಯ ಇಲಾಖೆ. –	21	5.	ಕಾಲೇಜು ಶಿಕ್ಷಣ ಇಲಾಖೆ.	356 ಬೋಧಕೇತರ

6.	ಕಾಲೇಜು ಶಿಕ್ಷಣ ಇಲಾಖೆ. –	94
7.	ಉದ್ಯೋಗ ಇಲಾಖೆ. –	159
8.	ಪದವಿ ಪೂರ್ವ ಶಿಕ್ಷಣ ಇಲಾಖೆ. –	361
9.	ಸಾರ್ವಜನಿಕ ಶಿಕ್ಷಣ ಇಲಾಖೆ. –	400
10.	ತಾಂತ್ರಿಕ ಶಿಕ್ಷಣ ಇಲಾಖೆ	136
11.	ಸಾರಿಗೆ ಇಲಾಖೆ.	35
ಒಟ್ಟು		1263

ಒಟ್ಟು –	1393
ವಿಲೀನಕ್ಕೆ ಬಾಕಿ ಇರುವವರು	126

ಇ)	ಹೀಗೆ ವಿಲೀನಗೊಂಡ ಜೆ.ಓ.ಸಿ ಸಿಬ್ಬಂದಿಗಳಿಗೆ ಪಿಂಚಣಿಗೆ ವಿಲೀನ ಪೂರ್ವ ಸೇವೆಯನ್ನು ಪರಿಗಣಿಸದೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	– ಬಂದಿದೆ –
ಈ)	ಬಂದಿದ್ದಲ್ಲಿ, ಈ ಸಿಬ್ಬಂದಿಗಳ ಖಾಯಂಮಾತಿಗೂ ಹಿಂದಿನ (ಅರೆಕಾಲಿಕ ಸೇವೆ) ಸೇವೆಯನ್ನು ಪರಿಗಣಿಸಿ ಪಿಂಚಣಿ ಸೌಲಭ್ಯ ನೀಡಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು?	ಅಧಿಸೂಚನೆ ಸಂಖ್ಯೆ: ಸಂವ್ಯಶಾಇ 22 ಶಾಸನ 2011ರನ್ವಯ ಅರೆಕಾಲಿಕ ವೃತ್ತಿ ಆಧಾರಿತ ಕೋರ್ಸುಗಳ ನೌಕರನು ಕರ್ತವ್ಯಕ್ಕೆ ಹಾಜರಾದ ನಂತರ, ಈ ಅಧಿನಿಯಮದಡಿಯಲ್ಲಿ ಆತನ ಪ್ರಾರಂಭಿಕ ಮೂಲ ವೇತನವನ್ನು ಆತನು ವಿಲೀನಗೊಂಡ ಹುದ್ದೆಯ ಪ್ರವರ್ಗದ ಕಾಲಿಕ ವೇತನ ಶ್ರೇಣಿಯ ಕನಿಷ್ಟಕ್ಕೆ ನಿಗಧಿಗೊಳಿಸತಕ್ಕದ್ದು ಹಾಗೂ ತನ್ನ ವಿಲೀನಕ್ಕೆ ಮೊದಲು ಸಲ್ಲಿಸಿದ ಸೇವೆಯನ್ನು ವೇತನ, ಜೇಷ್ಠತೆ ಹಾಗೂ ರಜೆ ಅಥವಾ ಪಿಂಚಣಿಗೆ ಸಂಬಂಧಿಸಿದಂತೆ ಲೆಕ್ಕಕ್ಕೆ ತೆಗದುಕೊಳ್ಳತಕ್ಕದಲ್ಲ ಎಂದಿರುವುದರಿಂದ ಖಾಯಂಮಾತಿಗೂ ಹಿಂದಿನ ಸೇವೆಯನ್ನು ಪರಿಗಣಿಸಿ ಸೌಲಭ್ಯ ನೀಡಲು ಅವಕಾಶವಿರುವುದಿಲ್ಲ.

ಸಂಖ್ಯೆ:ಇಡಿ 36 ಟಿವಿಇ 2018

(ಎನ್.ಮಹೇಶ್)
ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು.